ಮೈಸೂರು – ಮಾನಂದವಾಡಿ (ರಾಷ್ಟ್ರೀಯ ಹೆದ್ದಾರಿ 33) ರಸ್ತೆಯ ಅಭಿವೃದ್ಧಿ

496 (758) ಶ್ರೀ ಚಿಕ್ಕಣ್ಣ (ಹೆಚ್.ಡಿ.ಕೋಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು ವ್ಯಾಪ್ತಿಯ ಮೂಲಕ ಹಾದು ಕೇರಳ ರಾಜ್ಯಕ್ಕೆ ಸಂಪರ್ಕಿಸುವ ಮೈಸೂರು – ಮಾನಂದವಾಡಿ ರಾಜ್ಯ ಹೆದ್ದಾರಿ ಸಂಖ್ಯೆ.33 ರಲ್ಲಿ ಬಾವಲಿಯಿಂದ 31 ಕಿಮೀ. ಅರಣ್ಯ ಪ್ರದೇಶದಲ್ಲಿರುವ ರಸ್ತೆಯನ್ನು ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯು ಅನುಮತಿ ನೀಡಿದೆಯೇ;

ಆ) ಈ ಹಿಂದೆ ಇದೇ ಪ್ರಶ್ನೆಯನ್ನು ಸದನದಲ್ಲಿ ಕೇಳಲಾಗಿ ಮಾನ್ಯ ಲೋಕೋಪಯೋಗಿ ಸಚಿವರು, ಅರಣ್ಯ ಇಲಾಖೆ ಅನುಮತಿ ಪಡೆದು ಡಿಸೆಂಬರ್ 2009 ರೊಳಗಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಲಿಖಿತ ಹೇಳಿಕೆ ನೀಡಿದ್ದರು, ಆದರೆ, ಇದುವರೆಗೂ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಅರಣ್ಯ ಇಲಾಖೆಯು ಅನುಮತಿ ನೀಡಿದೆ. ಆದರೆ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ ಇವರ ನೇತೃತ್ವದಲ್ಲಿ ರಚಿಸಲಾಗಿರುವ ಉಸ್ತುವಾರಿ ಸಮಿತಿಯು ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಅನುಮತಿ ನೀಡಿರುವುದಿಲ್ಲ.

ಆ) ಈ ಕಾಮಗಾರಿಯ ಒಟ್ಟು ರಸ್ತೆಯ ಉದ್ದ 30.50 ಕಿ.ಮೀ ಆಗಿದ್ದು ಇದರಲ್ಲಿ 28.80 ಕಿ.ಮೀ ರಸ್ತೆಯು ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದಲ್ಲಿ ಹಾದು ಹೋಗುತ್ತಿದ್ದು ಉಳಿದ 1.70 ಕಿ.ಮೀ ರಸ್ತೆಯು ಉದ್ಯಾನವನದ ಹೊರಭಾಗದಲ್ಲಿದೆ.

ಉದ್ಯಾನವನದ ಹೊರಭಾಗದಲ್ಲಿನ 1.70 ಕಿ.ಮೀ ಹಾಗೂ ಉದ್ಯಾನವನದಲ್ಲಿ ಉದ್ದೂರು ಕ್ರಾಸ್‌ನಿಂದ ಕೇರಳ ಗಡಿವರೆಗೆ ಇರುವ 19.30 ಕಿ.ಮೀ ರಸ್ತೆಯನ್ನು ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲಾಗಿದೆ. ಉದ್ದೂರು ಕ್ರಾಸ್‌ನಿಂದ ದಮ್ಮನಕಟ್ಟೆವರೆಗಿನ 9.50 ಕಿ.ಮೀ. ರಸ್ತೆಯಲ್ಲಿ 5.00 ಕಿ.ಮೀ ಗಳಿಗೆ ಬಿ.ಎಂ ಪದರವನ್ನು ಹಾಗೂ 3.00 ಕಿ.ಮೀಗಳಿಗೆ ಡಬ್ಲ್ಯು.ಎಂ.ಎಂ

ಪದರವನ್ನು ಕೊದಿಸಲಾಗಿದೆ. ಉಳಿದಂತೆ 1.50 ಕಿ.ಮೀ ರಸ್ತೆಯನ್ನು ಇನ್ನೂ ಕೈಗೊಳ್ಳಬೇಕಿದೆ.

ಉದ್ದೂರು ಕ್ರಾಸ್‌ನಿಂದ ದಮ್ಮನಕಟ್ಟೆವರೆಗಿನ ಮೇಲ್ಕಂಡ 9.50 ಕಿ.ಮೀ ರಸ್ತೆಯಲ್ಲಿನ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ ಇವರ ನೇತೃತ್ವದಲ್ಲಿ ರಚಿಸಲಾಗಿರುವ ಉಸ್ತುವಾರಿ ಸಮಿತಿಯು ಅನುಮತಿ ನೀಡದಿರುವ ಕಾರಣ ಸದರಿ ರಸ್ತೆಯು ಮಾರ್ಚ್ 2009 ರಿಂದ ಅಪೂರ್ಣ ಗೊಂಡಿರುತ್ತದೆ. ಉಸ್ತುವಾರಿ ಸಮಿತಿಯು ಮೇಲಿನ 9.50 ಕಿ.ಮೀ ರಸ್ತೆಗೆ ಬದಲಾಗಿ ಪರ್ಯಾಯ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಶಿಫಾರಸ್ಸು ಮಾಡಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಮಾಪನೆಯಲ್ಲಿರುವ ಸಹಕಾರ ಸಂಘಗಳು

497 (646) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಹಕಾರ ಸಂಘಗಳು ಸಮಾಪನೆಯಲ್ಲಿವೆ? (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಕೆಲವು ಸಮಾಪನೆ ಸಹಕಾರ ಸಂಘಗಳ ನೋಂದಣಿ ರದ್ದುಪಡಿಸಲು ಅನಾವಶ್ಯಕ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಇ) ಬಂದಿದ್ದಲ್ಲಿ, ಸಹಕಾರ ಇಲಾಖೆಯ ಅಪರ ನಿಬಂಧಕರಂತಹ ಉನ್ನತ ಹುದ್ದೆಯ ಅಧಿಕಾರಿಗಳನ್ನು ಸಮಾಪನಾಧಿಕಾರಿಗಳನ್ನಾಗಿ ನೇಮಿಸ ಲಾಗಿರುವುದೇ?

ಈ) ಇಂತಹ ನೇಮಕಾತಿಗಳು ಸಮರ್ಥನೀಯವೇ?

ಶ್ರೀ ಲಕ್ಷ್ಮಣ ಸವದಿ. (ಸಹಕಾರ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ವಿವರ ಈ ಕೆಳಂಡಂತಿರುತ್ತವೆ.